ಈ ಮಧ್ಯೆ ನಾಡಿಗನ ಬದುಕಿನಲ್ಲಿಯೂ ಅನೇಕ ಸ್ಥಿತ್ಯಂತರಗಳು ಸಂಭವಿಸಿದುವು. 1957ರಿಂದ 1965ರವರೆಗೆ ಮಡಗಾಂವ ಚೌಗಲೆ ಕಾಲೇಜದಲ್ಲಿ ಲೆಕ್ಚರರ್ ಆಗಿದ್ದ ನಾಡಿಗ, 1965ರಿಂದ 1971ರವರೆಗೆ ಪಕ್ಕದ ಮಾಪ್ಸಾದ ಸೆಂಟ್ ಝೇವಿಯರ್ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದಲ್ಲಿ ಪ್ರೊಫೆಸರ್ ಮತ್ತು ಮುಖ್ಯಸ್ಥನಾಗಿದ್ದ; ಆ ಬಲದಿಂದ, ಪಣಜಿಯಲ್ಲಿದ್ದ ಬಾಂಬೆ ವಿವಿಯ ಪಿ.ಜಿ. ಸೆಂಟರಿನಲ್ಲಿ ಸಂದರ್ಶಕ ಪ್ರಾಧ್ಯಾಪಕನೂ ಆಗಿದ್ದ. ಮಾಪ್ಸಾ ತ್ಯಜಿಸಿ, ಪಿ. ಶ್ರೀನಿವಾಸರಾವ್, ಎ.ಕೆ. ರಾಮಾನುಜನ್ ಸಲಹೆ ಮೇರೆಗೆ ಅಮೆರಿಕಕ್ಕೆ ಹೋದ. ಅಲ್ಲಿ ಫಿಲಿಡೆಲ್ಫಿಯಾದ ಟೆಂಪಲ್ ವಿವಿಯಲ್ಲಿ ಅರೆಕಾಲಿಕ ಬೋಧಕನಾದ (1972-74). ಆ ಅವಧಿಯಲ್ಲಿಯೇ ಒಂದು ವರ್ಷ (1973) ಹ್ಯಾವರ್‌ಫೋರ್ಡ್ ಕಾಲೇಜಿನಲ್ಲಿ ಇಂಗ್ಲಿಷ್ ಬೋಧಕನಾಗಿ ದುಡಿದ. ನಂತರ ಅವಕಾಶ ಮಾಡಿಕೊಂಡು ಫಿಲಿಡೆಲ್ಫಿಯಾದ ಟೆಂಪಲ್ ವಿವಿಯಿಂದ ಇಂಗ್ಲಿಷ್‌ದಲ್ಲಿ ಮತ್ತೊಂದು ಎಂ.ಎ. ಮಾಡಿಕೊಂಡ (1979). ಇರಲು ಭಾವ ಶ್ರೀನಿವಾಸರಾವ್ ಮನೆಯಿತ್ತು.

ಈ ಮಧ್ಯೆ ಭಾರತಕ್ಕೆ ಮರಳಿದ್ದ ನಾಡಿಗ ಅಧ್ಯಾಪನ ಕ್ಷೇತ್ರಕ್ಕೆ ಹೋಗದೇ, 'ಮಲ್ಲಿಗೆ' ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಬಾಪ್ಕೋ ಪ್ರಕಾಶನಕ್ಕೆ ಹಿರಿಯ ವ್ಯವಸ್ಥಾಪಕನಾಗಿ ಸೇರಿಕೊಂಡ (1975-1980). ಆಗ ಕರ್ನಾಟಕದ ಸಾಹಿತ್ಯ ಕ್ಷೇತ್ರದ ಅನೇಕ ಹೊಸ ಪ್ರಯೋಗಗಳನ್ನು, ಪ್ರಕಾಶನಗಳನ್ನು 'ಬಾಪ್ಕೋ'ದವರಿಗೆ ನೀಡಿದ. 'ಬಾಪ್ಕೋ'ದಲ್ಲಿ ಹೊಂದಲಾರದೇ ಹೊರಬಂದ ನಾಡಿಗ ಕೆಲ ವರ್ಷ ಬಸವನಗುಡಿಯ ಗಾಂಧಿಬಜಾರದ ಮುಖ್ಯ ರಸ್ತೆಯಲ್ಲಿ 'ಕರ್ನಾಟಕ ಬುಕ್ ಹೌಸ್' ಅಂಗಡಿ ಹಾಕಿದ್ದ. ಆ ಅಂಗಡಿ ಬೆಂಗಳೂರಿನ ಬಹುಪಾಲು ಲೇಖಕರಿಗೆ ದಿನಾಲು ಸಂಜೆ ಕೂಡುವ, ಪರಸ್ಪರ ಭೆಟ್ಟಿಯಾಗುವ ಸ್ಥಳವಾಗಿತ್ತು. ಬೇರೆ ಊರುಗಳಿಂದ ಬರುತ್ತಿದ್ದ ನಮ್ಮಂಥ ಲೇಖಕರೂ ಸಾಮಾನ್ಯವಾಗಿ ನಾಡಿಗನನ್ನು ಅಲ್ಲಿಯೇ ಸಂಧಿಸುತ್ತಿದ್ದೆವು.

ಅವನ ಮುಕ್ತ ಸ್ವಭಾವ, ನೇರ ಸ್ವಚ್ಛ ಮಾತು, ನಿಷ್ಪಕ್ಷವಾಗಿದ್ದರೂ ನಿಷ್ಠುರವೆನಿಸುತ್ತಿತ್ತು; ಬಹಳ ಜನರಿಗೆ ಕಟುವೆನಿಸುತ್ತಿದ್ದ ವಿಮರ್ಶೆ ಮಾಡುವ ಹಟ ಮತ್ತು ಅವನ ಜಾತಿ ಅಡ್ಡಗಾಲಾಗಿದ್ದುವು. ಇಷ್ಟು ಓದಿದ್ದ, ಕಲಿತಿದ್ದ, ಅನುಭವಿಯಾಗಿದ್ದ ನಾಡಿಗನಿಗೆ ಬೆಂಗಳೂರು ವಿವಿಯ ಇಂಗ್ಲಿಷ್ ವಿಭಾಗದಲ್ಲಿ ಅನಾಯಾಸವಾಗಿ ಕೆಲಸ ಸಿಗಬೇಕಿತ್ತು. ನಂತರ ಜಿ.ಎಸ್. ಶಿವರುದ್ರಪ್ಪ ಮುಂತಾದವರ ಸಹಾಯ, ಸಲಹೆಯ ಮೇರೆಗೆ ಬೆಂವಿವಿಯ ಕನ್ನಡ ವಿಭಾಗದಲ್ಲಿ ಒಂದು ಯೋಜನೆ ಹಾಕಿಕೊಂಡು, ಇಂಗ್ಲಿಷ್ ರೀಡರ್ ಹುದ್ದೆ ಕೊಡಲಾಯಿತು. ಅಲ್ಲಿದ್ದುಕೊಂಡೇ ನಾಡಿಗ ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು ಕುರಿತು ಪಿಎಚ್.ಡಿ. ಮುಗಿಸಿಕೊಂಡ (1985).

* * *

ಬೆಂಗಳೂರು ಸೆಂಟ್ರಲ್ ಕಾಲೇಜ್ ಸೆನೆಟ್ ಹಾಲ್‌ನಲ್ಲಿ ನವಕಾವ್ಯ ಕುರಿತು ವಿಚಾರ ಸಂಕಿರಣವಿತ್ತು (1987ರ ಫೆಬ್ರುವರಿ 26-28). ಲ.ನಾ. ಭಟ್ಟರು ಹೆಡ್ ಆದ ಮೇಲೆ ಯೋಜಿಸಿದ್ದ ಮೊದಲ ಸಂಕಿರಣ. ಶಿವರಾಮ ಕಾರಂತರಿಂದ ಉದ್ಘಾಟನೆ, ಪುತಿನ ಅಧ್ಯಕ್ಷತೆ. ಅದೇ ದಿನ ಸಂಜೆ (1987 ಫೆಬ್ರುವರಿ 26) ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಕವನಸಂಗ್ರಹದ ಬಿಡುಗಡೆ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿತ್ತು. ನಾಡಿಗನೇ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದ. ಶಾಂತಿನಾಥ ದೇಸಾಯಿ, ಲಂಕೇಶ, ಗಿರಡ್ಡಿ ಮುಂತಾದವರು ನಮ್ಮ ಜೊತೆ ಬಂದಿದ್ದರು. ಆ ಹೊತ್ತಿಗಾಗಲೇ ಅಡಿಗರು ಬಹಳ ಹಣ್ಣಾಗಿದ್ದರು. ಬೆಂಗಳೂರಲ್ಲಿ ಚುನಾವಣೆಗೆ ನಿಂತಾಗ ಅವರ ಪರ ಪ್ರಚಾರಕ್ಕೆ ಹೋದಾಗ ನೋಡಿದ್ದ, ಅಥವಾ ನಾಡಿಗನ ಬುಕ್ ಹೌಸ್‌ಗೆ ಬರುತ್ತಿದ್ದ, ಗಾಂಧಿಬಜಾರದ ಮೂಲೆಯ ಕೆನರಾ ಬ್ಯಾಂಕ್ ಕಟ್ಟೆಯ ಮೇಲೆ ಯುವಮಿತ್ರರೊಂದಿಗೆ ನಾನು ನೋಡಿದ್ದ ಅಡಿಗರು ಈಗಿರಲಿಲ್ಲ, ಬಹಳ ನಿರ್ವಿಣ್ಣರಾಗಿದ್ದರು. ಬಹುಶಃ ಪಾರ್ಶ್ವವಾಯುಪೀಡಿತರಾಗಿದ್ದರು.

ನವ್ಯಕಾವ್ಯ ವಿಚಾರಸಂಕಿರಣದಲ್ಲಿ ಕೊನೆಯ ದಿವಸದ ಕೊನೆಯ ಭಾಷಣ ನನ್ನದಿತ್ತು. ಅದು ಅಡಿಗ ಮತ್ತು ಹಿಂದೀ ಕವಿ ಅಜ್ಞೇಯರ ಕಾವ್ಯದ ತೌಲನಿಕ ವಿಶ್ಲೇಷಣೆ. ನನ್ನ ಪ್ರಬಂಧವನ್ನು ಲ.ನಾ. ಭಟ್ಟ, ಲಂಕೇಶ, ರಾಮಚಂದ್ರ ಶರ್ಮ, ಎಚ್.ಎಸ್. ರಾಘವೇಂದ್ರರಾವ್, ಅ.ರಾ. ಮಿತ್ರ, ಎಂ.ಎಚ್. ಕೃಷ್ಣಯ್ಯ, ಕಿ.ರಂ. ನಾಗರಾಜ ಮುಂತಾದವರು ಮೆಚ್ಚಿ ಅಭಿನಂದಿಸಿದರು.